# ಅಮುರ್ ಕಾರ್ಪ್ ಮೀನಿನ ಸಂತಾನೋತ್ಪತ್ತಿ ಮತ್ತು ಮೀನುಮರಿಗಳ ಸಾಕಣೆ

ಡಾ ಮಂಜುಳೇಶ ಪೈ, 9480122865/9611873740 ಮತ್ತು ವರುಣ ಬಾಗ್ಲೋಡಿ
ಮೀನುಗಾರಿಕಾ ಮಹಾವಿದ್ಯಾಲಯ, ಕಂಕನಾಡಿ, ಮಂಗಳೂರು

ಅಮುರ್ ಕಾರ್ಪ್, ಸಾಮಾನ್ಯ ಗೆಂಡೆ ಮೀನಿನ ಒಂದು ತಳಿಯಾಗಿದ್ದು, ನೈಸರ್ಗಿಕವಾಗಿ ಪಶ್ಚಿಮ ಏಷ್ಯಾ ಮತ್ತು ಪೂರ್ವ ಯುರೋಪ್ ಖಂಡಗಳ ನದಿಗಳಲ್ಲಿ ದೊರೆಯುವುದು. ಇತ್ತೀಚಿನ ದಿನಗಳಲ್ಲಿ ಜಲಕೃಷಿಗೆ ಉಪಯೋಗಿಸುವ ಅಮುರ್ ಕಾರ್ಪ್ ಮೀನನ್ನು ಮೊಟ್ಟಮೊದಲ ಬಾರಿಗೆ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಹಿನೀರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಹೆಬ್ಬಾಳದಲ್ಲಿ ಸಂಶೋಧನೆ ನಡೆಸಿ ಹೊಸ ತಳಿಯರೂಪದಲ್ಲಿ ಬಿಡುಗಡೆ ಮಾಡಲಾಯಿತು.

## ಅಮುರ್ ಕಾರ್ಪ್ ತಳಿಯ ವೈಶಿಷ್ಟ್ಯಗಳು

ಪ್ರಯೋಗಕ್ಕೆ ಬೇಕಾದ ಮೀನನ್ನು ಪ್ರಥಮಬಾರಿಗೆ ಹಂಗೇರಿದೇಶದ ಸಿಹಿನೀರು ಮೀನುಗಾರಿಕಾ ಸಂಶೋಧನಾ ಕೇಂದ್ರದಿಂದ ತರಲಾಯಿತು. ಸತತ ಆರು ವರ್ಷಗಳ ಕಾಲ ಸಂಶೋಧನೆಯಾದ ನಂತರ ಈ ತಳಿ ನಮ್ಮ ದೇಶದಲ್ಲಿ ದೊರೆಯುವ ಸಾಮಾನ್ಯ ಗೆಂಡೆಗಿಂತ ಶೇ. 27ರಷ್ಟು ವೇಗವಾಗಿ ಬೆಳೆಯುತ್ತದೆಂದು ತಿಳಿದುಬಂದಿದೆ. ಅಲ್ಲದೆ ಅಮುರ್ ತಳಿ ದೇಶದಲ್ಲಿ ಸಿಗುವ ತಳಿಗಿಂತ ತಡವಾಗಿ ಪ್ರೌಢತೆಗೆ ಬರುವುದು ಎಂದು ತಿಳಿದುಬಂದಿದ್ದು, ದೇಹದ ಆಕಾರ ಉದ್ದವಾಗಿದ್ದು, ಹೊಟ್ಟೆ ಸ್ವಲ್ಪ ತೆಳುವಾಗಿರುವುದು. ದೇಶಿಯ ಸಾಮಾನ್ಯ ಗೆಂಡೆಯಂತೆ, ಅಮುರ್ ತಳಿಯು ಕೃತಕ ಆಹಾರವನ್ನು ಸುಲಭವಾಗಿ ಸ್ವೀಕರಿಸುತ್ತದೆ.



ಅಮುರ್ ಕಾರ್ಪ್



ಸ್ಥಳೀಯ ಸಾಮಾನ್ಯ ಗೆಂಡೆ

## ಅಮುರ್ ತಳಿಯ ಸಂತಾನೋತ್ಪತ್ತಿ ಕ್ರಮ

- ಭಾರತೀಯ ಪ್ರಧಾನ ಗೆಂಡೆಮೀನುಗಳ (ಕಾಟ್ಲಾ, ರೋಹು ಮತ್ತು ಮೃಗಾಲ) ಸಂತಾನೋತ್ಪತ್ತಿಗಿಂತ ಸಾಮಾನ್ಯ ಗೆಂಡೆ ಮೀನಿನ ಮರಿ ಉತ್ಪಾದನೆ ಸುಲಭ.
- ಅಮುರ್ ಕಾರ್ಪ್‌ನ ಸಂತಾನೋತ್ಪತ್ತಿ ವಿಧಾನ ಸಾಮಾನ್ಯ ಗೆಂಡೆ ಮೀನಿನ ರೀತಿಯದಾಗಿದ್ದು, ನಿಂತ ನೀರಿನ ಕೊಳಗಳಲ್ಲಿ ಲೈಂಗಿಕ ಪ್ರೌಢತೆಯನ್ನು ಪಡೆದು ವರ್ಷವಿಡೀ ಸಂತಾನೋತ್ಪತ್ತಿಯನ್ನು ಮಾಡಬಲ್ಲುದು.
- ಈ ತಳಿಗೆ ಹಾರ್ಮೋನ್ ಚುಚ್ಚುಮದ್ದಿನ ಅವಶ್ಯಕತೆಯಿಲ್ಲ.
- ಆದರೆ ಈ ತಳಿಯ ಮೊಟ್ಟೆಗಳು ಅಂಟುಗುಣದಿಂದ ಕೂಡಿರುವುದರಿಂದ, ಅವುಗಳು ಜಲಸಸ್ಯ ಅಥವಾ ಇತರೆ ವಸ್ತುಗಳಿಗೆ ಅಂಟಿಕೊಳ್ಳುತ್ತದೆ.
- ಈ ಮೀನು ಮೊಟ್ಟೆ ಇಡಬೇಕಾದರೆ ಜಲಸಸ್ಯ, ಒಣ ಭತ್ತದ ಹುಲ್ಲು ಅಥವಾ ಪ್ಲಾಸ್ಟಿಕ್ ಎಳೆಗಳನ್ನು ಮೀನಿನ ತೊಟ್ಟಿಯಲ್ಲಿ ಇಡುವುದು ಅತ್ಯಗತ್ಯ.

## ಪ್ರೌಢ ಹೆಣ್ಣು ಮತ್ತು ಗಂಡು ಮೀನುಗಳ ಆಯ್ಕೆ ವಿಧಾನ

- ಅಮುರ್ ಗೆಂಡೆಮೀನು ತನ್ನ ಜೀವನದ ಆರು ತಿಂಗಳು ಮತ್ತು ಒಂದು ವರ್ಷದ ಮಧ್ಯೆ ಲೈಂಗಿಕ ಪ್ರಬುದ್ಧತೆಯನ್ನು ಹೊಂದುತ್ತದೆ.
- ಪ್ರಾಯಕ್ಕೆ ಬಂದ ಗಂಡು ಮತ್ತು ಹೆಣ್ಣು ಮೀನುಗಳನ್ನು ಗುರುತಿಸುವುದು ಸುಲಭ.
- ಪ್ರಾಯಕ್ಕೆ ಬಂದ ಗಂಡು ಮೀನಿನ ರೆಕ್ಕೆಗಳು ಒರಟಾಗಿರುತ್ತವೆ ಮತ್ತು ಹೊಟ್ಟೆಯ ಭಾಗವನ್ನು ಮೃದುವಾಗಿ ಒತ್ತಿದರೆ ಬಿಳಿಶುಕ್ಲವು ಹೊರಬರುವುದು.



ಪ್ರಬುದ್ಧ ಅಮುರ್ ಕಾರ್ಪ್ ಮೀನುಗಳು

- ಹೆಣ್ಣು ಮೀನಿನ ರೆಕ್ಕೆಗಳು ನಯವಾಗಿರುತ್ತವೆ ಮತ್ತು ಹೊಟ್ಟೆಯ ಭಾಗವನ್ನು ಒತ್ತಿದರೆ ಮೃದುವಾಗಿರುತ್ತದೆ ಮತ್ತು ಒಂದೆರಡು ಮೊಟ್ಟೆಗಳು ಹೊರಬರಬಹುದು.



ಲಿಂಗ ಗುರುತಿಸುವಿಕೆ

**ಸಂತಾನೋತ್ಪತ್ತಿ ಕ್ರಮ**

- ಪ್ರಬುದ್ಧತೆಗೆ ಬರುವ ಗಂಡು ಮತ್ತು ಹೆಣ್ಣು ಮೀನುಗಳನ್ನು ಬೇರೆ ಬೇರೆ ಕೊಳಗಳಲ್ಲಿ ಬಿಟ್ಟು ಒಳ್ಳೆಯ ರೀತಿಯಲ್ಲಿ ಸಾಕಾಣಿಕೆ ಮಾಡಬೇಕು.
- ಸಂತಾನೋತ್ಪತ್ತಿಗಾಗಿ, ಒಂದು ಪ್ರಬುದ್ಧ ಹೆಣ್ಣು ಮೀನಿನ ಜೊತೆ ಎರಡು ಗಂಡುಮೀನುಗಳನ್ನು ತಾಜಾ ನೀರಿರುವ ಕೊಳದಲ್ಲಿ ಬಿಡಬೇಕು.
- ಜಲಸಸ್ಯಗಳಾದ ಹೈಡ್ರಿಲ್ಲಾ ಅಥವಾ ವ್ಯಾಲಿಸ್ನೇರಿಯಾ ಅಥವಾ ನೈಲಾನ್ ಎಳೆಗಳನ್ನು ಪ್ರತಿ ಒಂದು ಕೆ.ಜಿ. ಹೆಣ್ಣು ಮೀನಿನ ತೂಕಕ್ಕೆ 1 ಅಥವಾ 2 ಕೆ.ಜಿ.ಯಂತೆ ಹಾಕಬೇಕು.
- ಒಂದೆರಡು ದಿನದಲ್ಲಿ ಮೀನುಗಳು ಸಂತಾನೋತ್ಪತ್ತಿ ಮಾಡುವುವು.
- ಫಲಭರಿತ ಮೊಟ್ಟೆಗಳು ಸಸ್ಯ ಅಥವಾ ನೈಲಾನ್ ಎಳೆಗಳಿಗೆ ಅಂಟಿಕೊಳ್ಳುತ್ತವೆ ಮತ್ತು ಅವುಗಳನ್ನು ಹ್ಯಾಚರಿಗೆ ವರ್ಗಾಯಿಸಬೇಕು. ಸುಮಾರು 36–72 ಗಂಟೆಗಳಲ್ಲಿ ಮೊಟ್ಟೆಯೊಡೆದು ಮರಿ ಹೊರಬರುತ್ತದೆ.



ಹೈಡ್ರಿಲ್ಲಾ ಸಸ್ಯಕ್ಕೆ ಅಂಟಿಕೊಂಡಿರುವ ಫಲಭರಿತ ಮೊಟ್ಟೆಗಳು

**ಮರಿಗಳ ಸಾಕಾಣಿಕೆ**

- ಗೆಂಡೆ ಮೀನು ಮರಿಗಳ ಸಾಕಣೆಯ ಮೊದಲ ಹಂತ : ನರ್ಸರಿ ಕೊಳದಲ್ಲಿ 4–8 ಮಿ.ಮೀ. ಮರಿಯನ್ನು ಬೆರಳುಗಾತ್ರದ ಮರಿಯ ತನಕ (40–75 ಮಿ.ಮೀ.) ಸಾಕುವುದು.

**ಮೀನುಮರಿಗಳನ್ನು ಕೊಳಕ್ಕೆ ಬಿಡುವ ಮುನ್ನ ಅನುಸರಿಸಬೇಕಾದ ಕ್ರಮಗಳು**

1. ಕಳೆಗಿಡಗಳ ನಿಯಂತ್ರಣ
2. ಅನಗತ್ಯ ಜೀವಿಗಳ ನಿರ್ಮೂಲನ
3. ಸುಣ್ಣ ಮತ್ತು ಗೊಬ್ಬರ ಹಾಕುವುದು
4. ಹಾನಿಕಾರಕ ಕೀಟಗಳನಾಶಕ ಬಳಸದೆ ಇರುವುದು
5. ಕೃತಕ ಆಹಾರ ನೀಡುವುದು
6. ಕೊಳದ ನಿರ್ವಹಣೆ

- ಈ ಮೇಲೆ ತಿಳಿಸಿದ ಹಂತಗಳ ಅನುಸಾರ ಸಜ್ಜುಗೊಳಿಸಿದ ನರ್ಸರಿ ಕೊಳದಲ್ಲಿ ಹೆಕ್ಟೇರಿಗೆ 2 ರಿಂದ 10ಮಿಲಿಯನ್ ಮರಿಗಳನ್ನು ಬಿಡಬಹುದು.
- ಕೊಳದ ಒಳಗೆ ನೀರು ಬರುವ ಮತ್ತು ನೀರು ಹೊರಹೋಗುವ ದ್ವಾರಗಳಿಗೆ ಅತೀ ಚಿಕ್ಕ ಕಣ್ಣಿನ ಬಲೆಯ ತುಂಡನ್ನು ಕಟ್ಟಬೇಕು.
- ನೈಸರ್ಗಿಕ ಆಹಾರದ ಜೊತೆಗೆ, ಕೃತಕ ಆಹಾರ (ಬೇರೆಡೆ ತಿಳಿಸಿದ ಪ್ರಕಾರ) ನೀಡಬೇಕು.
- ವೈಜ್ಞಾನಿಕ ರೀತಿಯಲ್ಲಿ ಕೊಳ ನಿರ್ವಹಣೆ ಮಾಡಿದರೆ, ಒಂದೆರಡು ತಿಂಗಳಲ್ಲಿ ಮರಿಗಳು ಬೆರಳುದ್ದಗಾತ್ರಕ್ಕೆ ಬೆಳೆಯಬಲ್ಲವು.



ಬೆರಳುದ್ದ ಗಾತ್ರದ ಮರಿಗಳು

**ಪ್ರಬುದ್ಧ ಸ್ಥಿತಿಗೆ ಅಮುರ್ ಮೀನು ಬೆಳೆಸುವುದು**

- ಬೆರಳುದ್ದದ ಅಮುರ್ ತಳಿಯನ್ನು ವೈಜ್ಞಾನಿಕವಾಗಿ ತಯಾರಿ ಮಾಡಿದ ಕೊಳದಲ್ಲಿ ಬಿಟ್ಟರೆ, ಒಂದು ವರ್ಷದಲ್ಲಿ ಪ್ರತಿಮೀನು ಸುಮಾರು 600–1000 ಗ್ರಾಂ ವರೆಗೆ ಬೆಳೆಯಬಲ್ಲದು.
- ಮಾರಾಟ ಮಾಡಬಹುದಾದ ಗಾತ್ರಕ್ಕೆ ಮೀನು ಬೆಳೆಸಬೇಕಾದರೆ, ನರ್ಸರಿ ಕೊಳದ ತಯಾರಿಯಲ್ಲಿ ಅನುಸರಿಸಬೇಕಾದ ಎಲ್ಲಾ ಹಂತಗಳನ್ನು (ಹಾನಿಕಾರಕ ಕೀಟಗಳ ನಿರ್ವಹಣೆ ಹೊರತುಪಡಿಸಿ) ಇಲ್ಲಿಯು ಪಾಲಿಸಬೇಕು.

ಪುಟ, ೧೦ರಲ್ಲಿ ಮುಂದುವರಿದಿದೆ...

# ಕರ್ನಾಟಕ ರಾಜ್ಯದ ಕಾವೇರಿಗೆಂಡೆ ಮೀನು



ಫಲಿತಗಂಡು ಮೀನಿನ ಮೂತಿಯ ಮೇಲೆ ಬೀಳಚುಕ್ಕೆ (ಎಡ) ಮತ್ತು ಹೆಣ್ಣು ಮೀನಿನ ನಯವಾದ ಮೇಲ್ಭಾಗದ ಮೂತಿ (ಬಲ)

**ಕಾ**ವೇರಿಗೆಂಡೆ ಅಥವಾ 'ಕಾವೇರಿಕಾರ್ಪ್' ಕರ್ನಾಟಕ ರಾಜ್ಯ ಮೀನು ಎಂದು ಘೋಷಿಸಿರುವುದು ಸಂತೋಷದ ವಿಷಯ. ಈ ಮೀನಿನ ವೈಜ್ಞಾನಿಕ ಹೆಸರು 'ಪಂಟಿಯಸ್(ಬಾರ್ಬೋಡೆಸ್) ಕರ್ನಾಟಿಕಸ್' ಆಗಿದ್ದು, ಸಾಮಾನ್ಯವಾಗಿ ಕರ್ನಾಟಿಕ್‌ಕಾರ್ಪ್ ಎಂದು ಕರೆಯಲಾಗುವುದು. ಕಾವೇರಿಗೆಂಡೆ ಮೀನು ಪಶ್ಚಿಮ ಘಟ್ಟಗಳಲ್ಲಿ ಉದ್ಭವಿಸುವ ಕಾವೇರಿ ಮತ್ತು ಕೇರಳದ ಚಾಲಕುಡಿ ನದಿಗಳಲ್ಲಿ ಮಾತ್ರ ವಾಸಿಸುತ್ತವೆ ಎಂದು ತಿಳಿದು ಬಂದಿದ್ದು, ತಮಿಳುನಾಡಿನಲ್ಲಿ ಹರಿಯುವ ಕಾವೇರಿ ಮತ್ತು ಮಹಾರಾಷ್ಟ್ರದಲ್ಲಿ ಹರಿಯುವ ಗೋದಾವರಿ ನದಿಗಳಲ್ಲಿಯೂ ದೊರೆಯುವುದೆಂದು ಇತ್ತೀಚಿನ ದಿನಗಳಲ್ಲಿ ಕಂಡುಬಂದಿದೆ. ಸಮೀಕ್ಷೆಗಳ ಪ್ರಕಾರ ಈ ಮೀನು ನಮ್ಮ ರಾಜ್ಯದ ಕಾವೇರಿ ತಾಣಗಳಾದ ಕೊಡಗು, ರಾಮನಾಥಪುರ, ಕೃಷ್ಣರಾಜಸಾಗರ ಮತ್ತು ಕಬಿನಿ ಜಲಾಶಯಗಳಲ್ಲಿ ಅಲ್ಪ ಪ್ರಮಾಣದಲ್ಲಿ ಮಾತ್ರ ದೊರೆಯುವುದರಿಂದ, ಈ ಮೀನನ್ನು ಸಂರಕ್ಷಿಸಲು ಮತ್ತು ಇದರ ಸಂತತಿಯನ್ನು ಪುನರುಜ್ಜೀವಗೊಳಿಸುವ ದೃಷ್ಟಿಯಿಂದ ಕಾವೇರಿಗೆಂಡೆ ಮೀನನ್ನು "ಕರ್ನಾಟಕರಾಜ್ಯ ಮೀನು" ಎಂದು ಘೋಷಿಸಲಾಗಿದೆ.

**ಗುಣಲಕ್ಷಣಗಳು:** ಬೇರೆ ಗೆಂಡೆ ಮೀನುಗಳ ಹಾಗೆ, ಕಾವೇರಿಗೆಂಡೆಯು ಬಹಳ ರುಚಿಕರವಾದ ಮೀನು. ಈ ಮೀನಿನ ಲಭ್ಯತೆ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದ್ದು, ಇದರ ಸಂಖ್ಯೆ ಅತಿ ವಿರಳವಾಗಿದೆ. ಇದರ ಬೆಳವಣಿಗೆಯು ವರ್ಷಕ್ಕೆ 400 ಗ್ರಾಂ ಆಗಿದ್ದು, ತನ್ನ ಜೀವನದಲ್ಲಿ 12ಕೆ.ಜಿ.ಯವರೆಗೆ ಬೆಳೆಯಬಲ್ಲದು (ಉದ್ದ: 60 ಸೆಂ.ಮೀ). ಈ ಮೀನಿನ ಮುಖ್ಯ ಆಹಾರ ಪಾಚಿ, ಸಣ್ಣ ಕೀಟಗಳು ಮತ್ತು ಮೃದು ಸಸ್ಯಗಳು ಜೊತೆಗೆ ಮರಗಳಿಂದ ಬೀಳುವ ಹಣ್ಣುಗಳನ್ನು ಸಹ ಈ ಗೆಂಡೆ ಮೀನುಗಳು ತಿನ್ನುತ್ತವೆ. ಆಲೀವ್ ಅಥವಾ ಕಂದು ನೀಲಿ ವರ್ಣದ ಈ ಮೀನುಗಳು ವೇಗವಾಗಿ ಹರಿಯುವ ನದಿಯ ಕಲ್ಲು-ಬಂಡೆಗಳ ಮಧ್ಯೆ ವಾಸಿಸುತ್ತವೆ ಮತ್ತು ಮೊಟ್ಟೆ ಇಟ್ಟು ಮರಿಮಾಡಲು ಕಡಿಮೆ ಆಳ ಇರುವ ನದಿಯ ಭಾಗವನ್ನು ಆಯ್ಕೆ ಮಾಡುತ್ತವೆ. ನೈರುತ್ಯ ಮುಂಗಾರಿನ ಒಂದೆರಡು ತಿಂಗಳು ಮೊದಲೇ ಮರಿಮಾಡಲು ಸರಿಯಾದ ಸಮಯ. ಇತ್ತೀಚಿನ ದಿನಗಳಲ್ಲಿ ಮಾನವ ನಿರ್ಮಿತ ಕ್ರಿಯೆಗಳಿಂದಾಗಿ ಈ ಮೀನಿನ ನೈಸರ್ಗಿಕ ಸಂತಾನೋತ್ಪತ್ತಿಗೆ ಬಹಳ ಪೆಟ್ಟು ಬಿದ್ದಿದೆ. ಹಾಗಾಗಿ ಈ ಮೀನು ಅವನತಿಯತ್ತ ಸಾಗುತ್ತಿದೆ.

**ಕೃತಕ ಸಂತಾನೋತ್ಪತಿ:** ಇತರೆ ದೊಡ್ಡಗಾತ್ರದ ಗೆಂಡೆ ಮೀನಿನ ಹಾಗೆ, ಕಾವೇರಿಗೆಂಡೆ ನಿಂತ ನೀರಿನ ಕೊಳಗಳಲ್ಲಿ ಸಂತಾನೋತ್ಪತಿ ಮಾಡುವುದಿಲ್ಲ. ಆದುದರಿಂದ ಈ ಮೀನಿನ ಮರಿಉತ್ಪಾದನೆ ಮಾಡಬೇಕಾದರೆ ಪ್ರಬುದ್ಧ ಮೀನುಗಳ ಕೃತಕ ನಿರ್ವಹಣೆ ಅಗತ್ಯ. ಈ ಮೀನಿನ ಪ್ರಬುದ್ಧ ಸ್ಥಿತಿಗೆ ಬರುವಂತೆ ಮಾಡಲು (ಅದರಲ್ಲೂ ಹೆಣ್ಣು ಮೀನು) ಕೊಳವನ್ನು ಉತ್ತಮ ರೀತಿಯಲ್ಲಿ ಸಿದ್ಧಪಡಿಸಿ, ಬೇಕಾದ ಪ್ರಮಾಣದಲ್ಲಿ ಗಂಡು ಮತ್ತು ಹೆಣ್ಣು ಮೀನನ್ನು ಬೇರೆ ಬೇರೆ ಕೊಳಗಳಲ್ಲಿ ಬಿಟ್ಟು, ಒಳ್ಳೆಯ ಕೃತಕ ಆಹಾರ (ಗುಳಿಗೆಯಾಕಾರದ ತೇಲುವ ಅಥವಾ ಮುಳುಗುವ) ಕೊಟ್ಟು, ಆಗಿಂದಾಗ್ಗೆ ಸ್ವಲ್ಪ ಪ್ರಮಾಣದಲ್ಲಿ ಕೊಟ್ಟಿಗೆ ಗೊಬ್ಬರವನ್ನು ಕೊಳಗಳಿಗೆ ಹಾಕಬೇಕು. ಹೀಗೆ ಮಾಡುವುದರಿಂದ ಒಂದೆರಡು ವರ್ಷದಲ್ಲಿ ಮೀನುಗಳು ಪ್ರಬುದ್ಧತೆಗೆ ಬರುತ್ತವೆ. ಪ್ರಬುದ್ಧಾವಸ್ಥೆಗೆ ಬಂದ ಗಂಡು ಮತ್ತು ಹೆಣ್ಣುಗಳನ್ನು ಆಯ್ಕೆ ಮಾಡಬೇಕು. ಹೆಣ್ಣು ಮೀನು ಸ್ವಲ್ಪ ದೊಡ್ಡದಾಗಿದ್ದು, ಮೂತಿತುದಿಯು ನಯವಾಗಿರುತ್ತದೆ. ಗಂಡು ಮೀನು ಸ್ವಲ್ಪಚಿಕ್ಕದಾಗಿದ್ದು, ಮೂತಿತುದಿಯಲ್ಲಿ ಒರಟಾದ ಚುಕ್ಕೆಗಳಿರುತ್ತವೆ. ಈ ಗೆಂಡೆ ಮೀನಿನ ಸಂತಾನೋತ್ಪತಿ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಪ್ರಾರಂಭವಾಗಿ ಮಳೆಗಾಲದ ಕೊನೆಯಲ್ಲಿ ಮುಕ್ತಾಯವಾಗುತ್ತದೆ. ಈ ಗೆಂಡೆ ಮೀನುಗಳು ಕೊಳಗಳಲ್ಲಿ ನೈಸರ್ಗಿಕವಾಗಿ ಸಂತಾನೋತ್ಪತಿ ಮಾಡದಿರುವುದರಿಂದ, ಹಾರ್ಮೋನ್ ಇಂಜಕ್ಷನ್ ಬಳಸಿ ಮೊಟ್ಟೆ ಇಡುವಂತೆ ಮಾಡಲಾಗುವುದು. ಗಂಡು ಮತ್ತು ಹೆಣ್ಣು ಮೀನುಗಳನ್ನು 1:1ರ ಪ್ರಮಾಣದಲ್ಲಿ ಆಯ್ಕೆ ಮಾಡಿ ಓವಾಪ್ರಿಮ್ ಅಥವಾ ಓವಾಟೈಡ್ ಹಾರ್ಮೋನ್ ದ್ರಾವಣವನ್ನು ಪ್ರತಿ ಕೆ.ಜಿ.ಗೆ ಹೆಣ್ಣು ಮೀನಿಗೆ 0.8 ಮಿ.ಲೀ.ನಂತೆ ಮತ್ತು ಪ್ರತಿ ಕೆ.ಜಿ. ಗಂಡು ಮೀನಿಗೆ 0.3 ಮಿ.ಲೀ.ನಷ್ಟು ಚುಚ್ಚಿ ಸಂತಾನೋತ್ಪತಿಗಾಗಿ ವೃತ್ತಾಕಾರದ ನೀರಿನ ಕೊಳದಲ್ಲಿ ಬಿಡಬೇಕು. ಹೆಣ್ಣು ಮತ್ತು ಗಂಡು ಮೀನನ್ನು ಸುಲಭವಾಗಿ ಗುರುತಿಸುವ ಸಲುವಾಗಿ ಎಲೆಕ್ಟ್ರಾನಿಕ್‌ಚಿಪ್/ಟ್ಯಾಗ್ ಅಳವಡಿಸಲಾಗುವುದು. ಸುಮಾರು 18–20 ಗಂಟೆಗಳ ನಂತರ ಹೆಣ್ಣು ಮೀನಿನಿಂದ ಫಲಿತಮೊಟ್ಟೆಗಳನ್ನು ಹೊರಸೂಸುವಂತೆ ಮಾಡಿ, ಗಂಡು ಮೀನಿನಿಂದ ಶುಕ್ಲವನ್ನು ಅದೇ ರೀತಿ ತೆಗೆದು, ಕೃತಕ ಗರ್ಭಧಾರಣೆ ಮಾಡಲಾಗುವುದು. ಫಲಭರಿತ ಮೊಟ್ಟೆಗಳನ್ನು ಆಯತಾಕಾರದ ಮರದ ತಟ್ಟೆಯಲ್ಲಿ (ಸಣ್ಣಕಣ್ಣಿನ ಬಲೆಯ ತಳಭಾಗ) ಬಿಟ್ಟು, ತಾಜಾ ನೀರು ಹರಿಯುವಂತೆ ಎಚ್ಚರ ವಹಿಸಬೇಕು. ಫಲಭರಿತ ಮೊಟ್ಟೆಗಳು ನಿಂಬೆ ಅಥವಾ ತಿಳಿ ಕಿತ್ತಳೆ ಬಣ್ಣ ಹೊಂದಿರುತ್ತವೆ. ಸುಮಾರು 38ರಿಂದ 48 ಗಂಟೆಗಳಲ್ಲಿ ಮೊಟ್ಟೆಯೊಡೆದು ಮರಿ ಹೊರಬರುವುದು. ಸುಮಾರು 4 ರಿಂದ 6 ದಿನಗಳವರೆಗೆ ತನ್ನಲ್ಲಿರುವ ಹಳದಿ ಬಣ್ಣದ ಪೋಷಕಾಂಶದ ಸಹಾಯದಿಂದ ಮರಿ ಬದುಕಬಲ್ಲದು. ಇದಾದ ನಂತರ ಮರಿಗಳಿಗೆ ನೈಸರ್ಗಿಕ ಆಹಾರ (ಸೂಕ್ಷ್ಮ ಜೀವಿಗಳು) ಅಥವಾ ಕೋಳಿ ಮೊಟ್ಟೆಯ ದ್ರವವನ್ನು ಒಂದು ವಾರದವರೆಗೆ ಪ್ರತಿದಿನ ನೀಡಬೇಕು. ನಂತರ ಗೊಬ್ಬರ ಹಾಕಿ ಮೊದಲೆ ತಯಾರು ಮಾಡಿದ ನರ್ಸರಿ ಕೊಳಕ್ಕೆ ಮರಿಗಳನ್ನು ವರ್ಗಾಯಿಸಬೇಕು. ಕೊಳದಲ್ಲಿರುವ ನೈಸರ್ಗಿಕ ಆಹಾರ ಮತ್ತು ಕೊಡುವ ಕೃತಕ ಆಹಾರ (ತೌಡು ಮತ್ತು ಹಿಂಡಿ ಪುಡಿ)ಗಳ ಸಹಾಯದಿಂದ ಮರಿಗಳು ಬೆಳೆದು, ಇಪ್ಪತ್ತು ದಿನಗಳಲ್ಲಿ ಸುಮಾರು 15 ರಿಂದ 20ಮಿ. ಮೀ. ಉದ್ದ ತಲುಪುತ್ತವೆ.

✍ ಡಾ. ಎನ್. ಬಸವರಾಜ, 9972724719 ಮತ್ತು ಮಂಜುಳೇಶ ಪೈ,
ಜಲಕೃಷಿ ವಿಭಾಗ, ಮೀನುಗಾರಿಕಾ ಕಾಲೇಜು, ಮಂಗಳೂರು.